ನೋಡತೊಡಗಿದರು. 'ಏಯ್ ಏಯ್, ಹಾಳಾಗುತ್ತೆ' ಎಂದು ಕೂಗಿದರು. ಅದು ಮತ್ತೊಂದು ಮೂಲೆಯನ್ನು ಹಿಡಿದು ಕಚ್ಚಿತು. ಭಾಸ್ಕರನ ತಾಯಿ ಅಲ್ಲೇ ಇರುವ ಕೋಲನ್ನು ಕೈಗೆ ತೆಗೆದುಕೊಂಡಳು. ಕೋತಿ ಗೂರ್ರ್ ಗೂರ್ರ್ ಎಂದು ಮೇಲೆ ಬೀಳುವಂತೆ ಗುರಾಯಿಸಿತು. ಶಂಕರ 'ಅಕ್ಕೋ ಹುಷಾರು, ಅದ್ರ ಕೈಯಲ್ಲಿ ಮೊಬೈಲಿದೆ. ನ್ಯಾಕಿಂದ ಬಿಡಿಸ್ಕೋಬೇಕು' ಎಂದು ನುಡಿದ. ಭಾಸ್ಕರ 'ಗೇರ್ ಗೇರ್ ಮಂಗಣ್ಣ... ಗೇರ್ ಗೇರ್ ಮಂಗಣ್ಣ' ಎಂದು ಹಾಡುತ್ತಾ ತನ್ನ ಬೊಗಸೆಯನ್ನು ಅದರ ಕಡೆಗೆ ಚಾಚಿದ. ಅದು ಮತ್ತೆ 'ಗೂರ್ರ್' ಅಂತು.

ಶಂಕರ 'ಯಾಕ್ಲ ಅಷ್ಟೇನ ಬರೋದು. ಮುಂದಕ್ಕೆ ಹೇಳು. ನೋಡು, ಹೀಗೆ – ಗೇರ್ ಗೇರ್ ಮಂಗಣ್ಣ, ಕಡ್ಲೆಕಾಯಿ ನುಂಗಣ್ಣ' ಎಂದು ಹಾಡುತ್ತಾ ಕೋತಿಯ ಕಡೆಗೆ ಕೈತೋರಿಸಿದ.

ಭಾಸ್ಕರ 'ಅಣ್ಣೋ, ನನ್ನತ್ರ ಕಡ್ಲೆಕಾಯಿ ಇಲ್ಲ. ಹೆಂಗಾಡ್ಲಿ' ಎಂದು ನುಡಿದ.

'ಹೋಗ್ಲಿ, ಹೋಗಿ ಬಾಳೆ ಹಣ್ಣು ತಗೊಂಡು ಬಾ' ಭಾಸ್ಕರ ಮತ್ತೆ ನುಡಿದ.

ಭಾಸ್ಕರನ ತಾಯಿ ಒಳಗೆ ಹೋದವಳೇ ಒಂದು ಬಾಳೆಹಣ್ಣನ್ನು ತಂದು ಶಂಕರನ ಕೈಗೆ ಕೊಟ್ಟಳು. ಶಂಕರ ಆ ಬಾಳೆಹಣ್ಣನ್ನು ಕೋತಿಯ ಕಡೆಗೆ ಎಸೆದ. ಅದನ್ನು ಹಿಡಿಯುವಾಗ ಮೊಬೈಲನ್ನು ಕೆಳಗೆ ಬಿಡುತ್ತದೆ ಎಂಬ ಅವರ ಊಹೆ ಸುಳ್ಳಾಯಿತು. ಮೊಬೈಲು, ಬಾಳೆಹಣ್ಣು ಎರಡೂ ಕೋತಿಯ ಕೈಯಲ್ಲಿ ಭದ್ರವಾದವು. ಸ್ವಲ್ಪ ಹೊತ್ತಿನಲ್ಲೆ ಕೋತಿ ಬಾಳೆಹಣ್ಣನ್ನು ತಿಂದು ಮುಗಿಸಿ ಮತ್ತೆ ಮೊಬೈಲನ್ನು ಕಚ್ಚತೊಡಗಿತು. ಭಾಸ್ಕರನ ತಾಯಿ ಮತ್ತೆ ಒಳಗೆ ಹೋಗಿ ಆ್ಯಪಲ್ ತಂದಳು. ಶಂಕರ ಅದನ್ನೂ ಕೋತಿಯ ಕಡೆಗೆ ಎಸೆದ. ಮೊಬೈಲನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡ ಅದು ಆ್ಯಪಲ್ಲನ್ನು ಭದ್ರವಾಗಿ ಹಿಡಿದು ಅದನ್ನೂ ತಿಂದು ಮುಗಿಸಿತು. ಭಾಸ್ಕರನ ತಾಯಿ ಮನೆ ಮೇಲೆ ಹೋಗಲು ಮೆಟ್ಟಿಲ ಬಳಿ ನಡೆದಳು. ಕೋತಿ ಮೊಬೈಲನ್ನು ಹಿಡಿದುಕೊಂಡು ಮನೆಯ ಇನ್ನೊಂದು ಅಂಚಿಗೆ ನಡೆಯಿತು.

ಶಂಕರ ಅವಳನ್ನು ಮತ್ತೆ ತಡೆದು ಏನು ಮಾಡಬೇಕು ಎಂದು ಯೋಚಿಸತೊಡಗಿದ. ಅಷ್ಟರಲ್ಲಿ ಭಾಸ್ಕರ 'ಅಣ್ಣೋ, ನಿನ್ನ ಮೊಬೈಲ್ ಕೊಡು' ಎಂದು ಕೇಳಿದ. ಶಂಕರ ಭಾಸ್ಕರನ ಕಡೆಗೆ ಕುತೂಹಲದಲ್ಲಿ ನೋಡುತ್ತಾ ತನ್ನ ಮೊಬೈಲನ್ನು ಕೊಟ್ಟ. ಭಾಸ್ಕರ ಅದರಲ್ಲಿ ತನ್ನ ತಂದೆಯ ನಂಬರನ್ನು ಹುಡುಕಿ ಒತ್ತಿದ. ಕೋತಿಯ ಕೈಯಲ್ಲಿರುವ ಭಾಸ್ಕರನ ತಂದೆಯ ಮೊಬೈಲು ಬೆಳಗಿ ಜೋರಾಗಿ ನಾಯಿ ಬೊಗಳುವ ಸದ್ದು ಮಾಡಿತು. ಕೋತಿ ಹೆದರಿಕೊಂಡು ಮೊಬೈಲನ್ನು ಅಲ್ಲೇ ಬಿಟ್ಟು ಪಕ್ಕದ ಮನೆಯ ಮೇಲಕ್ಕೆ ಹಾರಿ ಮತ್ತೆ ಅಲ್ಲಿಂದ ಮರವೊಂದರೊಳಕ್ಕೆ ಜಿಗಿಯಿತು.

ಭಾಸ್ಕರನ ತಾಯಿ ಮೇಲಕ್ಕೆ ಹೋಗಿ ಮೊಬೈಲನ್ನು ತೆಗೆದುಕೊಂಡು 'ಸದ್ಯ ಸಿಗ್ತು. ಏನಾದ್ರು ಹೆಚ್ಚುಕಮ್ಮಿ ಆಗಿದ್ರೆ ಮತ್ತೆ ಎಂಟತ್ತು ಸಾವಿರ ದಂಡ ಆಗಿರೋದು' ಎನ್ನುತ್ತಾ ಕೆಳಗಿಳಿದಳು. 'ಮತ್ತೆ ಮುಟ್ಟಿದ್ರೆ ಕೈಗೆ ಬರೆ ಹಾಕ್ತೀನಿ' ಎಂದು ನುಡಿಯುತ್ತಾ ಒಳಗೆ ನಡೆದಳು.

ಶಂಕರ ಭಾಸ್ಕರನ ಕಡೆಗೇ ನೋಡುತ್ತಾ ಮುಗುಳುನಕ್ಕ. ಮತ್ತು ಅವನ ತಲೆಯನ್ನು ಹೆಮ್ಮೆಯಿಂದ ಸವರಿದ.

ಭಾಸ್ಕರ 'ಅಣ್ಣೋ, ಮತ್ತೆ ಪದ್ಯ ಹೇಳ್ತೀಯಾ?' ಎಂದು ಕೇಳಿದ.

ಶಂಕರ 'ಇಲ್ಲ ಕಣ್ಲಾ... ಇವತ್ತು ಕತೆ ಬರೀತೀನಿ. ಭಾಸ್ಕರನೂ... ಕೋತಿಯೂ... ಅಂತ. ಟೈಟಲ್ ಚಂದ ಇದೆ ಅಲ್ವ?' ಎಂದು ನುಡಿಯುತ್ತಾ ತನ್ನ ಮನೆಯ ಕಡೆಗೆ ನಡೆದ.

ಅಂದು ಮಧ್ಯಾಹ್ನ ಭಾಸ್ಕರ ಶಂಕರನ ಮನೆಗೆ ನಡೆದ. ಶಂಕರ ಏನೋ ಬರೆಯುತ್ತಲಿದ್ದ. ಪಕ್ಕದಲ್ಲಿ ಕೂತ ಭಾಸ್ಕರ 'ಅಣ್ಣೋ, ನಾನೂ ಪದ್ಯ ಹೇಳ್ಲೆ' ಎಂದ. ಶಂಕರ ಕುತೂಹಲದಲ್ಲಿ ಭಾಸ್ಕರನ ತಲೆ ಸವರಿ 'ಹೇಳು' ಎಂದ.

**'ಗೇರ್ ಗೇರ್ ಮಂಗಣ್ಣ**
**ಮೊಬೈಲು ಕೆಳಗೆ ಹಾಕಣ್ಣ**
**ಅಪ್ಪ ಹೊಡೀತಾರಣ್ಣ ಅಮ್ಮ ಬೈತಾರಣ್ಣ**
**ಆಪಲ್ ಕೊಡ್ತೀನಿ ಕೇಳಣ್ಣ**
**ಮೊಬೈಲು ನಂಗೆ ನೀಡಣ್ಣ**
**ಗೇರ್ ಗೇರ್ ಮಂಗಣ್ಣ**
**ನೀನು ನಂಗೆ ಫ್ರೆಂಡಣ್ಣ...'**

ಇಷ್ಟು ಹೇಳಿ ಭಾಸ್ಕರ ನಿಲ್ಲಿಸಿದ. ಶಂಕರ ಮತ್ತೊಮ್ಮೆ ಭಾಸ್ಕರನ ತಲೆಯನ್ನು ಸವರಿ 'ಚಂದವಿದೆ ಭಾಸ್ಕರ. ಇದ್ನೆ ಬುಕ್ಕಲ್ಲಿ ಬರೀ ಹೋಗು' ಎಂದು ನುಡಿದ. ಭಾಸ್ಕರ ಎದ್ದು ತನ್ನ ಮನೆಯ ಕಡೆಗೆ ನಡೆದ. ●